ಮತ್ಯಾವುದೋ ಕಂಪನಿಯವರು ಒಂದು ಮಿಕ್ಸಿಯ ಜೊತೆ ಎರಡು ಜಾರ್ ಉಚಿತವಾಗಿ ಕೊಡುವ ಮಾಹಿತಿಯಿರುವ ಜಾಹೀರಾತು ಪತ್ರಗಳೂ ಈ ರಾಶಿಯಲ್ಲಿ ಕಾಣಸಿಗುತ್ತವೆ. ಭಾನುವಾರಗಳಂದು ಅಪ್ಪನ ಕೈ ಹಿಡಿದು ಬರುವ ಮಕ್ಕಳಿಗೆ ಪಕ್ಕದಲ್ಲಿನ ಪತ್ರಿಕೆಯ ನಡುವೆಲ್ಲೋ ಫ್ಯಾಂಟಮ್ ಮುಂತಾದ ಕಾಮಿಕ್ಸ್‌ಗಳು ಕಂಡು ರೋಮಾಂಚನವಾಗುತ್ತದೆ. ಇನ್ನುಳಿದಂತೆ ನಾಗನ ಹೆಡೆಯ ಮೇಲಿನ ಹೊಳೆಯುವ ಮಣಿಯಂತೆ ಕಾಣುವ ಸ್ಪಟಿಕಗಳು ತಣ್ಣೀರಿನ ಲೋಟದೊಳಗೆ ಕುಳಿತು, ಯಾವುದೇ ಕ್ಷಣದಲ್ಲಿ, ಯಾರದೇ ಕುತ್ತಿಗೆಯ ಮೇಲೆ ಬಾಬುವಿನ ರೇಜರು ಮಾಡಬಹುದಾದ ಗಾಯವನ್ನು ತಣ್ಣಗಾಗಿಸಲಿಕ್ಕೆ ಸಿದ್ಧವಾಗಿ ಕುಳಿತಿರುತ್ತವೆ. ಅರ್ಧ ಕತ್ತರಿಸಿದ ಬ್ಲೇಡುಗಳು ರೇಜರ್‌ನೊಳಗೆ ನುಗ್ಗಿ ಕುಳಿತು, ತಮ್ಮ ಪಾಲಿನ ಕೂದಲಷ್ಟನ್ನು ಕತ್ತರಿಸಿ, ತಮ್ಮ ಹುಟ್ಟಿನ ಉದ್ದೇಶವನ್ನು ಪೂರ್ಣಗೊಳಿಸಿಕೊಂಡು ಕಸದ ಬುಟ್ಟಿ ಸೇರುತ್ತವೆ.

ಭಾನುವಾರಗಳಲ್ಲಿ 'ಅಯ್ಯಯ್ಯೋ ಬ್ಯಾಡ್ರೋ' ಎಂಬ ಅಳುವಿನ ಒಂದು ದನಿಗಾದರೂ ಈ ಮಾಡ್ರನ್ ಸಲೂನ್ ಸಾಕ್ಷಿಯಾಗಿಯೇ ಆಗುತ್ತದೆ. ಅಂಗನವಾಡಿಯಲ್ಲೋ ಇಲ್ಲಾ ಒಂದೆರಡನೇ ತರಗತಿಯಲ್ಲೋ ಕಲಿಯುತ್ತಿರುವ ಪುಟ್ಟ ಮಕ್ಕಳಿಗೆ ಕತ್ತರಿಯನ್ನು ಕಚಕ್ ಕಚಕ್ ಎಂದು ಕುಣಿಸುತ್ತಾ ಹತ್ತಿರ ಬರುವ ಈ ಬಾಬು ಭಂಡಾರಿ, ಕೈಯಲ್ಲಿ ದೊಣ್ಣೆ ಹಿಡಿದ ರಕ್ಕಸನಂತೆಯೋ, ಇಲ್ಲಾ ಇಂಜೆಕ್ಷನ್ ಹಿಡಿದ ಡಾಕ್ಟರಂತೆಯೋ ಕಾಣುವುದೇ ಇದಕ್ಕೆ ಕಾರಣ. ಹೀಗೆ, ಮಟನ್ ಶಾಪಿನಲ್ಲಿ ಸಿಲುಕಿದ ಕುರಿಯಂತೆ ಲಬೋ ಲಬೋ ಎಂದು ಬಾಯ್ಬಡಿದುಕೊಳ್ಳುವ ಮಕ್ಕಳಿಗೆ ತನ್ನ ಮಾತುಗಾರಿಕೆಯಲ್ಲೇ ಸಮಾಧಾನ ಮಾಡುವುದು ಬಾಬುವಿಗೊಲಿದ ಕಲೆ. ಇದಕ್ಕಾಗಿ ತನ್ನ ಮನೆಯ ಬಾವಿಯಲ್ಲಿರುವ ದೊಳ್ಳ ಕಪ್ಪೆಯ ಕಥೆಯನ್ನೋ ಇಲ್ಲಾ ಟೋಪಿ ಹಾಕಿಕೊಂಡ ಸಿಳ್ಳೇಕ್ಯಾತದ ಕಥೆಯನ್ನೋ ಹೇಳುವ ಅವನು, ಮಗು ಅದಕ್ಕೂ ಬಗ್ಗದಿದ್ದಾಗ, ಹಿಂದಿನ ವಾರ ಹೀಗೇ ಕಟಿಂಗ್ ಮಾಡಿಸಿಕೊಳ್ಳಲು ಹಟ ಮಾಡಿದ ಹುಡುಗನೊಬ್ಬನನ್ನು ತಾನು ಹೇಗೆ ಮಂತ್ರ ಹಾಕಿ ನಾಯಿ ಮಾಡಿದೆ ಎಂಬುದನ್ನು ವಿವರಿಸುತ್ತಾನೆ. ಅಲ್ಲಿಗೆ ಆ ಮಗುವಿನಲ್ಲುಳಿದ ಸ್ವಲ್ಪ ಹಟವೂ ಮಾಯವಾಗುತ್ತದೆ. ಹಾಗಾಗದಿದ್ದ ಪಕ್ಷದಲ್ಲಿ ಮಗುವಿನ ಅಪ್ಪ ಹಾಗೂ ಬಾಬು ಸೇರಿ ಒತ್ತಿ ಹಿಡಿದುಕೊಂಡು, ಬಲವಂತವಾಗಿ ಆಪರೇಷನ್ ಮಾಡುವವರಂತೆ ಮಗುವಿಗೆ ಕಟಿಂಗ್ ಮಾಡುತ್ತಾರೆ.

ಯಾರ್ಯಾರಿಗೆ ಯಾವ್ಯಾವ ಥರದಲ್ಲಿ ಕಟಿಂಗ್ ಮಾಡಬೇಕೆನ್ನುವುದು ಬಾಬುವಿಗೆ ಚೆನ್ನಾಗಿ ಗೊತ್ತಿದೆ. ಕ್ರಿಕೆಟ್ ಕಲಿಯಾದ ನೆಲ್ಲೀಕಟ್ಟೆ ಸುಮಂತನಿಗೆ ಸೆಹ್ವಾಗ್ ಕಟಿಂಗನ್ನೂ, ಡಿಸ್ಕೋ ಡ್ಯಾನ್ಸರ್ ವಾತಾಪಿಗೆ ಮೈಕಲ್ ಜಾಕ್ಸನ್ ಕಟಿಂಗನ್ನೂ, 'ನಾನು ಸಾಹಸ ಸಿಂಹ' ಎಂದು ಸ್ಟೈಲಾಗಿ ನಡೆಯುವ ಕೋಮಣಿಗೆ ವಿಷ್ಣುವರ್ಧನ್ ಕಟಿಂಗನ್ನೂ ಅವರು ಕೇಳದೆಯೇ ಮಾಡುತ್ತಾನೆ. 'ಇದೆಂತದ ಇದು, ಇಲಿ ಹೆರೆದಂಗಿದೆ. ಥೂ' ಎಂಬ ಮನೆಯವರ ಬೈಗುಳದಾಚೆಗೂ ಅವರಿಗೆ ಕನ್ನಡಿಯಲ್ಲಿ, ತಮ್ಮ ಬಿಂಬಕ್ಕೆ ಬದಲಾಗಿ ಸೆಹ್ವಾಗ್, ಜಾಕ್ಸನ್, ವಿಷ್ಣುವರ್ಧನರೇ ಕಾಣುತ್ತಾರೆಂದರೆ ಅದು ಬಾಬು ಹಾಕಿದ ಮೋಡಿಯ ಮಹಿಮೆ. ಇನ್ನು ತನ್ನ ಶಾಪಿಗೆ ಬರುವ ಗ್ರಾಹಕರ ಮನಸ್ಥಿತಿಗೆ ತಕ್ಕಂತೆ ಬಾಬುವಿನ ನಿಲುವು, ನಂಬಿಕೆಗಳೂ ಬದಲಾಗುತ್ತವೆ. ದೆವ್ವ–ಭೂತಗಳನ್ನು ನಂಬುವವರು ಬಂದಾಗ ತನಗೆ ದೆವ್ವ ಅಡ್ಡಹಾಕಿದ ಕಥೆ ಹೇಳುವ ಅವನು, ನಂಬದವರು ಬಂದಾಗ ಅದು ನಿಜದಲ್ಲಿ ಏನಾಗಿತ್ತೆನ್ನುವುದನ್ನು ಹೇಳುತ್ತಾನೆ. ಆದರೆ ಎದುರು ಕುಳಿತ ವ್ಯಕ್ತಿ ತೀರಾ ವಿತಂಡವಾದ ಮಾಡಿದಾಗ ಮಾತ್ರ ಏನೂ ಮಾತನಾಡದೇ ತನ್ನ ಕೆಲಸದಲ್ಲಿ ತೊಡಗುತ್ತಾನೆ.

ಬಸವ ಶೆಟ್ಟರ ಮೈದಾನದಂತಹ ತಲೆಯಿಂದ ಹುಡುಹುಡುಕಿ ಕೂದಲು ಕತ್ತರಿಸುವಾಗಲೂ, ಜಾಂಟಿ ಅರವಿಂದನ ಪಾಪಾಸ್ಕಳ್ಳಿಯಂತಹ ಗುಂಗುರು ಕೇಶರಾಶಿಗೆ ಕೈ ತುರುಕಿ ಹೆರೆಯುವಾಗಲೂ ಬಾಬುವಿಗೆ ಬೇಸರವಾಗುವುದಿಲ್ಲ. ಆದರೆ ಪಾಕೇಟು ಪರಮೇಶಿಯ, ಒಂದು ವಾರದಿಂದ ಸ್ನಾನ ಮಾಡದ ಜಿಗುಟು ಕೂದಲ ಕತ್ತರಿಸುವಾಗ ಮಾತ್ರ ಅವನಿಗೆ ಕೊಂಚ ಅಸಮಾಧಾನವಾಗುತ್ತದೆ. ಉಳಿದಂತೆ ಜುಟ್ಟು, ಜಡೆ, ಕ್ರಾಪುಗಳೆನ್ನದೆ ಸಕಲವನ್ನೂ ಸಮಾನವಾಗಿ ಪರಿಗಣಿಸಿ ಕತ್ತರಿಸುವ ಬಾಬುವಿನ ಕತ್ತರಿ ಸಮಾನತೆಯ ಮಂತ್ರ ಸಾರುತ್ತದೆ.

ಊರಿನ ಅನೇಕ ಧುರೀಣರೂ ಬಿಡುವು ಮಾಡಿಕೊಂಡು ತಂತಮ್ಮ ನಿಲುವು, ರಾಜಕೀಯ, ಭಾಷಣಗಳ ಜೊತೆಗೇ ಬಾಬುವಿನ ಶಾಪಿಗೆ ಬರುತ್ತಾರೆ. ಹಾಗೆ ಬಂದಾಗೆಲ್ಲಾ ಆ ಶಾಪು ರಾಜಕೀಯ ವಿಶ್ಲೇಷಣೆಯ ಕೊಠಡಿಯೋ ಇಲ್ಲಾ ಚುನಾವಣಾ ಭಾಷಣದ ವೇದಿಕೆಯೋ ಆಗುತ್ತದೆ. ರಾಜ್ಯದಲ್ಲಿ ರಾಜಕೀಯದ ಹವಾಮಾನ ಹೇಗಿದೆ? ಯಾವ ರಾಜಕಾರಣಿ ಗೆಲ್ಲಬೇಕೆಂದರೆ ಏನು ಮಾಡಬೇಕು? ಯಾರಿಗಿಂತ ಯಾರು ಎಷ್ಟು ಮುಂದಿದ್ದಾರೆ? ಎಂಬೆಲ್ಲ ತಜ್ಞ ಅಭಿಪ್ರಾಯಗಳು ಉದುರುವ ಕೂದಲಿಗೊಂದರಂತೆ ವ್ಯಕ್ತವಾಗುತ್ತವೆ. ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದವರಿಬ್ಬರಿಗೂ ಸಮಾನ ಜೈಕಾರ ಹೇಳಿ, ಗೆಲ್ಲುವುದು ನೀವೇ ಎಂಬ ಭರವಸೆಯಿತ್ತು, ಕೂದಲು ಕತ್ತರಿಸಿ ಕಳಿಸುವ ಬಾಬು ಭಂಡಾರಿಯ ಓಟು ತಮಗೇ ಎಂದು ಎರಡೂ ಪಕ್ಷದವರೂ ನಂಬಿಕೊಂಡಿದ್ದಾರೆ. ಇನ್ನು ಪ್ರಪಂಚದ ಪ್ರತಿಯೊಂದು ಸಂಗತಿಯನ್ನೂ ವಿಶ್ಲೇಷಿಸುವ ಸ್ವಘೋಷಿತ ತಜ್ಞರೂ ಬಾಬುವಿನ ಶಾಪಿನಲ್ಲಿ ಕಾಣಸಿಗುತ್ತಾರೆ. ಎಮ್ಮೆ ಏಕೆ ಈಯುತ್ತಿಲ್ಲ ಎಂಬುದರಿಂದ ಹಿಡಿದು ಸ್ಮಶಾನಕಾಳಿಯನ್ನು ಒಲಿಸಿಕೊಳ್ಳುವುದು ಹೇಗೆ ಎಂಬುದರ ತನಕ ಎಲ್ಲದರ ಕುರಿತಾಗಿಯೂ ಉಚಿತ ಉಪನ್ಯಾಸ ಕೊಡುವ ಅನೇಕರು, ಕಟಿಂಗ್ ಮಾಡಿಸಿಕೊಳ್ಳುತ್ತಲೇ ಬಾಬುವಿಗೆ ಪಾಠ ಮಾಡುತ್ತಾರೆ. ತನಗೆ ಎಂಟಾಣೆ ಉಪಯೋಗವೂ ಇಲ್ಲದ ಇಂತಹ ಸಂಗತಿಗಳನ್ನೂ ಬೇಸರವಿಲ್ಲದೆ ಕೇಳಿಸಿಕೊಳ್ಳುವ ಬಾಬು ಎಲ್ಲವೂ ಅರ್ಥವಾದಂತೆ ನಟಿಸುತ್ತಾ, ಕೊನೆಯಲ್ಲಿ ಅವರ ಅಷ್ಟೂ ಪುಗಸಟ್ಟೆ ಭಾಷಣವನ್ನು ಕತ್ತರಿಸಿದ ಕೂದಲಿನ ಜೊತೆಗೇ ಕಸದ ಬುಟ್ಟಿಗೆ ತುಂಬಿ ಹಗುರಾಗುತ್ತಾನೆ.

ಕೂದಲು ಉದುರುತ್ತಿರುವ ಅನೇಕರು ಆ ಊರಿನ ಡಾಕ್ಟರಿಗಿಂತ ಮೊದಲು ಸಲಹೆ ಕೇಳುವುದು ಬಾಬು ಭಂಡಾರಿಯ ಬಳಿಯೇ. ಕೂದಲು ಕತ್ತರಿಸಿದ ಮಾತ್ರಕ್ಕೆ ಮನುಷ್ಯನ ಕೇಶದ ಕುರಿತಾದ ಸಕಲ ಜ್ಞಾನವೂ ತನಗಿದೆ ಎಂದು ಭಾವಿಸುವ ಅವರ ನಂಬಿಕೆಗೆ ಅವನೇನೂ ನಿರಾಸೆ ಮಾಡುವುದಿಲ್ಲ. ಯಾವುದೋ ಮರದ ಸೊಪ್ಪು, ಯಾವುದೋ ಎಣ್ಣೆ, ಎಂಥದೋ ಕಷಾಯ... ಹೀಗೆ ತನ್ನ ಅರಿವಿನ ಪರಿಧಿಯೊಳಗೇ ಇರುವ ಪರಿಹಾರವೊಂದನ್ನು ಅವರ ಜೋಳಿಗೆಗೆ ಹಾಕಿಯೇ ಕಳಿಸುವ ಮೂಲಕ ಅವರಿಗೆ ಕೊಂಚ ಸಮಾಧಾನವನ್ನುಂಟುಮಾಡುತ್ತಾನೆ. ಪರಿಹಾರ ಕೇಳಿ ಹೊರಟವರ ಬಳಿ 'ಬೇಗ್ನೆ ಆ ಎಣ್ಣೆ ಹಚ್ಚಿನ್ಯಾ. ಊರಂಗಿದ್ದವ್ರ್ ಕೂದ್ಲೆಲ್ಲಾ ಉದ್ರಿ ಹ್ವಾದ್ರೆ ಮುಂದೆ ನಾನೆಂತ ಕಟ್ ಮಾಡುದು' ಎಂದು ಗಿಟಿ ಗಿಟಿ ನಗುತ್ತಾನೆ. ಹೊಲದಲ್ಲಿ ಬೆಳೆಯುವ ಬೆಳೆಗಿಂತ ವೇಗವಾಗಿ ಜನರ ಕೂದಲು ಬೆಳೆಯಲಿ ಎಂದು ಬೇಡುವ ಇವನನ್ನು ನೋಡಿ ದೇವರೂ ಮುಸಿ ಮುಸಿ ನಗುತ್ತಾನೆ. ಸಾಲದ್ದಕ್ಕೆ, ತನ್ನ ಕಾರ್ಯಕ್ಷೇತ್ರಕ್ಕೆ ಯಾವ ರೀತಿಯಲ್ಲೂ ಸಂಬಂಧಪಡದ ಹಲವು ಸಮಸ್ಯೆಗಳಿಗೂ ಅವನ ಬಳಿ ಪರಿಹಾರವಿರುತ್ತದೆ. ಹಿಂದೆಂದೋ, ತನ್ನ ಶಾಪಿನಲ್ಲಿ ಕುಳಿತ ಯಾರೋ ಹೇಳಿದ ಸಮಸ್ಯೆ–ಪರಿಹಾರಗಳನ್ನು ನೆನಪಿನ ಗೋಡೌನಿಗೆ ತುರುಕಿಕೊಳ್ಳುವ ಅವನು, ಮುಂದೆ ಮತ್ಯಾರೋ ಅದೇ ಸಮಸ್ಯೆಯನ್ನು ತೋಡಿಕೊಂಡಾಗ ಥಟ್ಟನೆ ಪರಿಹಾರ ಹೇಳುತ್ತಾನೆ. ಇಲ್ಲಾ ತಿಳಿದವರ ಬಳಿಗೆ ಕಳುಹಿಸುತ್ತಾನೆ.

ಸಮಯ ಕಳೆಯಲಿಕ್ಕೆಂದೇ ಬರುವ ಕೆಲವು ಪಡ್ಡೆಗಳಿಗೆ ಬಾಬುವಿನ ಶಾಪು ಸೋಮಾರಿ ಕಟ್ಟೆಯಾಗಿದೆ. ಆ ಸಮಯದಲ್ಲಿ ಅಲ್ಲಿ ಹುಟ್ಟುವ ಹಾಸ್ಯಗಳಿಗೆ ಶಾಪಿನ ಮಾಡಿನ ಹಂಚು ಹೋಹೋಹಾಹಾ ಎಂದು ಎಗರೆಗರಿ ಬೀಳುತ್ತದೆ. ಅವರೊಡನೆ ಬೆರೆಯುತ್ತಾ, ಅವರು ಹೇಳುವ ಹುಡುಗ ಲೋಕದ ರಹಸ್ಯಗಳನ್ನು ಮಿಲಿಟರಿ ರಹಸ್ಯದಷ್ಟೇ ಜೋಪಾನವಾಗಿ ಕಾಯುವ ಬಾಬು ಬಳಿಕ ಬರುವ ಹಿರಿಯರೊಟ್ಟಿಗೆ ಅವರ ಗಂಭೀರ ಸಂಗತಿಗಳನ್ನಷ್ಟೇ ಚರ್ಚೆ ಮಾಡುತ್ತಾನೆ. ಹೀಗೆ ಎಲ್ಲಾ ವಯಸ್ಸು, ಮನಸ್ಥಿತಿಗಳೊಡನೆ ಹೊಂದಾಣಿಕೆ ಮಾಡಿಕೊಳ್ಳುವ ಬಾಬು ಭಂಡಾರಿ ಎಲ್ಲರಿಗೂ ಆತ್ಮೀಯನೆನಿಸುತ್ತಾನೆ. ಯಾರೋ ಯಾರಿಗೋ ತಲುಪಿಸಬೇಕಾದ ವಸ್ತುಗಳಿಗೆ ಬಾಬಣ್ಣನ ಶಾಪೇ ನಿರೀಕ್ಷಣಾ ಕೊಠಡಿ. ಕೊಟ್ಟವನು ಇಟ್ಟು ಹೋದ ವಸ್ತು ಪಡೆದುಕೊಳ್ಳುವವ ಬಾರದ ಪಕ್ಷದಲ್ಲೂ ಇಲ್ಲಿ ಸುರಕ್ಷಿತವಾಗಿರುತ್ತದೆ. ಸಾಧ್ಯವಾದಲ್ಲಿ ಅವನ್ನು ಖುದ್ದು ಹೋಗಿ ಕ್ಷೇಮವಾಗಿ ತಲುಪಿಸುವ ಉಚಿತ ಸೇವೆಯೂ ಬಾಬುವಿನಿಂದ ಜರುಗುತ್ತದೆ. ಇನ್ನು ರಸ್ತೆಯಲ್ಲಿ ಅಂಡಲೆಯುವ ಎಷ್ಟೋ ಅಲೆಮಾರಿ ನಾಯಿ, ದನ, ಎಮ್ಮೆಗಳಿಗೆ ಬಾಬುವೇ ಪುಕ್ಕಟೆ ತಿಂಡಿ, ನೀರು ಕೊಡುತ್ತಾನೆ. ಹಾಗಾಗಿಯೇ ಊರಿನ



